# ವಿಕ ಡೈಲಿ ಡಾಕ್ಟರ್




**ಡಾ.ಸಿ.ಎನ್.ಮಂಜುನಾಥ್**

ಮುಖ್ಯಸ್ಥರು, ಜಯದೇವ ಹೃದ್ರೋಗ ವಿಜ್ಞಾನ, ಸಂಶೋಧನಾ ಸಂಸ್ಥೆ.




## ಬೆನ್ನು ಹಾಗೂ ಮೊಣಕೈ ನೋವು ಬರುತ್ತಿದೆ. ಪರಿಹಾರವೇನು?

**ಪ್ರಶ್ನೆ:** ನನ್ನ ಗಂಡನಿಗೆ ಹೃದಯಾಘಾತವಾಗಿತ್ತು. ಮೂರು ತಿಂಗಳ ಹಿಂದೆ ಆ್ಯಂಜಿಯೊಗ್ರಾಮ್ ಮಾಡಿಸಿಕೊಂಡಿದ್ದಾರೆ. ದಿನಕ್ಕೆ ಮೂರು ಬಾರಿ ಮಾತ್ರೆ ತೆಗೆದುಕೊಳ್ಳುತ್ತಿದ್ದಾರೆ. ಆದರೂ ಬೆನ್ನು ಹಾಗೂ ಮೊಣಕೈ ನೋವು ಬರುತ್ತಿದೆ. 20 ವರ್ಷದಿಂದ ನನ್ನ ಪತಿ ದ್ವಿಚಕ್ರ ವಾಹನದಲ್ಲೇ ಸಂಚರಿಸುತ್ತಿದ್ದಾರೆ. ಆಗಲೂ ಬೆನ್ನು ನೋವು ಹಾಗೂ ಮೊಣಕೈ ನೋವು ತೀವ್ರವಾಗಿತ್ತು. ಇದಕ್ಕೆ ಪರಿಹಾರ ಸೂಚಿಸಿ.

– **ಅಪ್ಪಣ್ಣ**, ಮಧುಗಿರಿ

**ಉತ್ತರ:** ರಕ್ತನಾಳದಲ್ಲಿ ಬ್ಲಾಕೇಜ್ ಇದ್ದರೆ ಆ್ಯಂಜಿಯೊಗ್ರಾಮ್ ಮಾಡಲಾಗುತ್ತದೆ. ನಿಮ್ಮ ಪತಿಗೆ ಮಾಡಿಸಿರುವ ಆ್ಯಂಜಿಯೊಗ್ರಾಮ್ ವರದಿಯಲ್ಲಿ ಏನಿದೆ ಎಂಬುದು ನನಗೆ ತಿಳಿಯದು. ರಕ್ತನಾಳದಲ್ಲಿ ಬ್ಲಾಕೇಜ್ ಇದ್ದರೆ ಅದಕ್ಕೆ ಪೂರಕವಾಗಿ ಚಿಕಿತ್ಸೆ ನೀಡಬೇಕಾಗುತ್ತದೆ. ರಕ್ತನಾಳ ಶೇ. 70ಕ್ಕಿಂತ ಹೆಚ್ಚಿನ ಹಾನಿಯಾಗಿದ್ದರೆ ಆ್ಯಂಜಿಯೊಪ್ಲಾಸ್ಟಿ ಮಾಡಿಸಬೇಕಾಗಬಹುದು. ಇದೆಲ್ಲವೂ ಆ್ಯಂಜಿಯೊಗ್ರಾಮ್ ವರದಿ ಮೇಲೆ ನಿರ್ಧರಿಸಬೇಕು. ನಡೆಯುವಾಗ, ಮೆಟ್ಟಿಲು ಹತ್ತುವಾಗ ನೋವು ಕಾಣಿಸಿಕೊಂಡರೆ ಅದು ಹೃದಯಕ್ಕೆ ಸಂಬಂಧಿಸಿದ ಸಮಸ್ಯೆ. ನುರಿತ ಹೃದ್ರೋಗ ವೈದ್ಯರ ಬಳಿ ತಪಾಸಣೆ ಮಾಡಿಸಿಕೊಂಡು ಟ್ರೆಡ್‌ಮಿಲ್ ಇಸಿಜಿ ಮಾಡಿಸಿಕೊಂಡರೆ ನಿಮ್ಮ ಸಮಸ್ಯೆ ಏನೆಂಬುದು ತಿಳಿಯಲಿದೆ.



### ನೀವೂ ಪ್ರಶ್ನೆ ಕೇಳಿ...

**ವಿಕ ಡೈಲಿ ಡಾಕ್ಟರ್** ಅಂಕಣದ ಮೂಲಕ ಪ್ರತಿದಿನ ಆರೋಗ್ಯ ಸಂಬಂಧಿತ ಪ್ರಶ್ನೆಗಳನ್ನು ಕೇಳಿ ತಜ್ಞವೈದ್ಯರಿಂದ ಪರಿಹಾರ ಪಡೆದುಕೊಳ್ಳಬಹುದು.

ವಾಟ್ಸ್ಆ್ಯಪ್: 7899578866